ಶ್ರೀಸುಮಧ್ವಸೇವಾಸಮಿತಿ ಟ್ರಸ್ಟ್ (ರಿ)
ರಾಘವೇಂದ್ರಸ್ವಾಮಿಗಳ ಮಠ, ಶಾಕಾಂಬರಿ ನಗರ
ಬೆಂಗಳೂರು – 560070   ದೂರವಾಣಿ – 65700759



22.04.2009ರಿಂದ 28.04.2009

“ಶ್ರೀ ಸುಮಧ್ವ ಧಾರ್ಮಿಕ ಬೇಸಿಗೆ ಶಿಬಿರ”

“ನಿತ್ಯೋಪಯೋಗಿ ವಿಷಯುಗಳು”

ಪಂಚಭೇದಗಳು : -

೧.ಜೀವ-ಜೀವ ಭೇದ
೨. ಜೀವ-ಈಶ್ವರ ಭೇದ
೩.ಜಡ-ಈಶ್ವರ ಭೇದ
೪. ಜಡ-ಜಡ ಭೇದ
೫.ಜೀವ-ಜಡ ಭೇದ

ತ್ರಿವಿಧ ಜೀವರುಗಳು :

೧. ಸಾತ್ವಿಕ ೨. ರಾಜಸ ೩. ತಾಮಸ

ನ ವ ವಿ ಧ ದ್ವೇ ಷ

೧. ಜೀವ - ಪರಮಾತ್ಮರಿಗೆ ಐಕ್ಯವಿದೆ ಎಂದು ಹೇಳುವುದು
೨. ಶ್ರೀಹರಿ ನಿರ್ಗುಣ ಎಂದು ಹೇಳುವುದು
೩. ಶ್ರೀಹರಿಯಲ್ಲಿ ಕೆಲವೇ ಗುಣಗಳಿವೆ ಎಂದು ಕಲ್ಪಿಸುವುದು
೪. ಇತರರು ಶ್ರೀಹರಿಗೆ ಸಮರು ಎಂದು ಭಾವಿಸುವುದು
೫. ಇತರರು ಶ್ರೀಹರಿಗೆ ಅಧಿಕರು ಎಂದು ಊಹಿಸುವುದು
೬. ಶ್ರೀಹರಿಯ ಅವತಾರ ಹಾಗೂ ಗುಣಗಳಲ್ಲಿ ಭೇದವೆಣಿಸುವುದು
೭. ಶ್ರೀಹರಿಯ ಅವತಾರಗಳಲ್ಲಿ ಜನನ ಮರಣಾದಿಗಳನ್ನು ಕಲ್ಪಿಸುವುದು
೮. ಹರಿಭಕ್ತರನ್ನು ದ್ವೇಷಿಸುವುದು ಹಾಗೂ
೯. ವೇದಾದಿ ಪ್ರಮಾಣಗಳನ್ನು ಅಲ್ಲಗಳೆಯುವುದು

ಈ ನವವಿಧ ದ್ವೇಷಗಳಿಂದ ಸಂಪೂರ್ಣಮುಕ್ತವಾದುದೇ ನಿರ್ಮಲಭಕ್ತಿ

ನ ವ ವಿ ಧ ಭ ಕ್ತಿ

೧. ಶ್ರ ವ ಣ ೨. ಕೀ ರ್ತ ನ ೩. ಸ್ಮ ರ ಣ
೪. ಪಾ ದ ಸೇ ವ ನ ೫. ಅ ರ್ಚ ನ ೬. ವ ಂ ದ ನ
೭. ದಾ ಸ್ಯ ೮. ಸ ಖ್ಯ ೯. ಆ ತ್ಮ ನಿ ವೇ ದ ನ

ಮಾ ಸ ನಿ ಯಾ ಮ ಕ ಭ ಗ ವ ದ್ರೂ ಪ ಗ ಳು

ಮಾಸ	**ಋತು**	**ನಿಯಾಮಕರೂಪ**
ಚೈತ್ರ	ವಸಂತ	ಶ್ರೀ ವಿಷ್ಣು
ವೈಶಾಖ	ವಸಂತ	ಶ್ರೀಮಧುಸೂಧನ
ಜ್ಯೇಷ್ಠ	ಗ್ರೀಷ್ಮ	ಶ್ರೀತ್ರಿವಿಕ್ರಮ
ಆಷಾಡ	ಗ್ರೀಷ್ಮ	ಶ್ರೀವಾಮನ
ಶ್ರಾವಣ	ವರ್ಷ	ಶ್ರೀಶ್ರೀಧರ
ಭಾದ್ರಪದ	ವರ್ಷ	ಶ್ರೀಹೃಷೀಕೇಶ
ಆಶ್ವೀಜ	ಶರತ್	ಶ್ರೀಪದ್ಮನಾಭ
ಕಾರ್ತೀಕ	ಶರತ್	ಶ್ರೀದಾಮೋದರ
ಮಾರ್ಗಶಿರ	ಹೇಮಂತ	ಶ್ರೀಕೇಶವ
ಪುಷ್ಯ	ಹೇಮಂತ	ಶ್ರೀನಾರಾಯಣ
ಮಾಘ	ಶಿಶಿರ	ಶ್ರೀಮಾಧವ
ಫಾಲ್ಘುಣ	ಶಿಶಿರ	ಶ್ರೀಗೋವಿಂದ

ಪಂಚ ಪತಿವ್ರತೆಯರು – ಅಹಲ್ಯಾ, ದ್ರೌಪದಿ, ತಾರ, ಮಂಡೋದರಿ, ತಾರ

ಷಣ್ಮಹಿಷಿಯರು – ಜಾಂಭವತಿ, ಕಾಳಿಂದೀ, ನೀಲಾ, ಭದ್ರ, ಮಿತ್ರವಿಂದಾ, ಲಕ್ಷಣಾದೇವಿ

ವಾ ರ ನಿ ಯಾ ಮ ಕ ಭ ಗ ವ ದ್ರೂ ಪ ಗ ಳು

ವಾರ	ವಾರಸಂಕಲ್ಪ	ನಿಯಾಮಕರೂಪ
ಭಾನುವಾರ	ಭಾನುವಾಸರ	ಶ್ರೀನಾರಾಯಣ
ಸೋಮವಾರ	ಇಂದುವಾಸರ	ಶ್ರೀ ನರಸಿಂಹ
ಮಂಗಳವಾರ	ಭೌಮ್ಯವಾಸರ	ಶ್ರೀ ವೇದವ್ಯಾಸ
ಬುಧವಾರ	ಸೌಮ್ಯವಾಸರ	ಶ್ರೀ ಪಾಂಡುರಂಗ
ಗುರುವಾರ	ಬೃಹಸ್ಪತಿವಾಸರ	ಶ್ರೀ ಸೀತಾರಾಮ
ಶುಕ್ರವಾರ	ಭಾರ್ಗವವಾಸರ	ಶ್ರೀ ಕೃಷ್ಣ
ಶನಿವಾರ	ಸ್ಥಿರವಾಸರ	ಶ್ರೀ ವೆಂಕಟೇಶ

ದಿಕ್ಕು	ದೇವತೆ	ಪತ್ನಿ	ಆಯುಧ	ಪಟ್ಟಣ	ವಾಹನ
ಪೂರ್ವ	ಇಂದ್ರ	ಶಚೀದೇವಿ	ವಜ್ರಾ	ಅಮರಾವತಿ	ಐರಾವತ
ಆಗ್ನೆಯ	ಅಗ್ನಿ	ಸ್ವಾಹಾ	ಶಕ್ತಿ	ತೇಜೋವತಿ	ಮೇಷ
ದಕ್ಷಿಣ	ಯಮ	ಶ್ಯಾಮಲ	ದಂಡ	ಸಂಯಮನಿ	ಮಹಿಷ
ನೈಋತ್ಯ	ನಿಋತಿ	ಕಾಳಿಕಾ	ಖಡ್ಗ	ಕೃಷ್ಣಾಂಗನ	ಕುದುರೆ
ಪಶ್ಚಿಮ	ವರುಣ	ಗಂಗಾ	ಪಾಶ	ಶ್ರದ್ಧಾವತಿ	ಮೊಸಳೆ
ವಾಯುವ್ಯ	ವಾಯು	ವಾಯವೀ	ಅಂಕುಶ	ಗಂಧವತಿ	ಜಿಂಕೆ
ಉತ್ತರ	ಕುಬೇರ	ರೋಹಿಣಿ	ಗದಾ	ಅಲಕಾ	ನರ
ಈಶಾನ್ಯ	ರುದ್ರ	ಪಾರ್ವತಿ	ಶೂಲ	ಕೈಲಾಸ	ವೃಷಭ

ಸಂವತ್ಸರಗಳು – 60

ಪಂಚ ಕರ್ಮೇಂದ್ರಿಯಗಳು : :

ವಾಕ್ (ಮಾತು)	*ಅಗ್ನಿ*
ಪಾಣಿ (ಕೈ)	*ದಕ್ಷಪ್ರಜಾಪತಿ*
ಪಾದ (ಕಾಲು)	*ಜಯಂತ*
ಗುಧ	*ಮಿತ್ರನಾಮಕ ಸೂರ್ಯ*
ಉಪಸ್ತ	*ಸ್ವಾಯಂಭುವಮನು , ಶತರೂಪಾದೇವಿ*

ಪಂಚ ಭೂತಗಳು : :

ಆಕಾಶ	ಗಣಪತಿ
ವಾಯು	ಪ್ರವಾಹವಾಯುದೇವರು
ತೇಜ(ಅಗ್ನಿ)	ಸೂರ್ಯ
ಆಪ್(ನೀರು)	ವರುಣ
ಪೃಥ್ವೀ(ಭೂಮಿ)	ಧರಣೀ ದೇವಿ , ಶನೇಶ್ವರ

ಪಂಚ ಭಗವದ್ರೂಪಗಳು : :

ಲಕ್ಷ್ಮೀಪತಿ ನಾರಾಯಣ
ಮಾಯಪತಿ ವಾಸುದೇವ
ಜಯಾಪತಿ ಸಂಕರ್ಷಣ
ಕೃತಿಪತಿ ಪ್ರದ್ಯುಮ್ನ
ಶಾಂತಿಪತಿ ಅನಿರುದ್ಧ

ಆಹಾರ ಪದಾರ್ಥಗಳಲ್ಲಿರುವ ದೇವತೆಗಳ ಹಾಗೂ ಭಗವಂತನ ರೂಪಗಳು			
೧	ಉಪ್ಪು	ನಿರಋತಿ	ಜನಾರ್ಧನ
೨.	ಚಟ್ಟಣಿ ಮುಂತಾದ ವ್ಯಂಜನಗಳು	ಬ್ರಹ್ಮ-ಬೃಹಸ್ಪತಿ	ಪ್ರದ್ಯುಮ್ನ
೩.	ಕಾಯಿಗಳಿಂದ ಮಾಡಿದ ಪಲ್ಯಗಳು	ಶೇಷ ದೇವರು	ಪದ್ಮನಾಭ
೪.	ತೊಪ್ಪಲುಗಳಿಂದ ಮಾಡಿದ ಪಲ್ಯಗಳು	ಮಿತ್ರನಾಮಕ ಸೂರ್ಯ	ಹೃಷೀಕೇಶ
೫.	ತೊವ್ವೆ	ಗರುಡ	ಶ್ರೀಧರ
೬.	ಹುಳಿಯಿಲ್ಲದ ಪದಾರ್ಥಗಳು	ರುದ್ರ	ಸಂಕರ್ಷಣ
೭.	ಒಗುರು ಪದಾರ್ಥಗಳು	ಯಮ	ಅನಿರುದ್ಧ
೮.	ಪರಮಾನ್ನ	ಭಾರತೀ ದೇವಿ	ನಾರಾಯಣ
೯.	ಹುಳಿಪದಾರ್ಥಗಳು , ಚಿತ್ರಾನ್ನಗಳು	ಗೌರೀ ದೇವಿ	ದಾಮೋದರ
೧೦.	ಭಕ್ಷಗಳು	ಸೂರ್ಯ	ಮಾಧವ
೧೧.	ಮಂಡಿಗೆ	ಬ್ರಹ್ಮ	ಮಧುಸೂದನ
೧೨.	ಸಕ್ಕರೆ – ಬೆಲ್ಲ	ಇಂದ್ರ	ವಾಸುದೇವ
೧೩.	ಎಣ್ಣೆ – ತುಪ್ಪಗಳಿಂದ ಕರಿದ ಪದಾರ್ಥ	ಜಯಂತ, ಬುಧ	ಅಧೋಕ್ಷಜ
೧೪.	ಉದ್ದಿನಬೇಳೆಗಳಿಂದ ಮಾಡಿದ ಒಡೆ	ಸ್ವಾಯಂಭುವ ಮನು	ಅಚ್ಯುತ
೧೫.	ಕುಂಬಳಕಾಯಿ, ಎಳ್ಳು, ಉದ್ದಿನಿಂದ ಮಾಡಿದ ಸಂಡಿಗೆ, ಹಪ್ಪಳ, ಇತರೆ	ದಕ್ಷಪ್ರಜೇಶ್ವರ	ನಾರಸಿಂಹ
೧೬.	ಹಣ್ಣುಗಳಿಗೆ ಸಂಬಂದಿಸಿದಂತ ರಸಗಳು	ಪ್ರಾಣ	ಉಪೇಂದ್ರ
೧೭.	ಅನ್ನದಲ್ಲಿ	ಚಂದ್ರ	ಕೇಶವ
೧೮.	ತುಪ್ಪ	ಲಕ್ಷ್ಮೀ ದೇವಿ	ಗೋವಿಂದ
೧೯.	ಬೆಣ್ಣೆ	ಮುಖ್ಯಪ್ರಾಣ	ತ್ರಿವಿಕ್ರಮ
೨೦.	ಹಾಲು	ಸರಸ್ವತಿ ದೇವಿ	ವಿಷ್ಣು
೨೧.	ಮೊಸರು	ಚಂದ್ರ	ವಾಮನ
೨೨.	ಕುಡಿಯುವ ನೀರು	ಬುಧ	ಕೃಷ್ಣ
೨೩.	ಸಾಸಿವೆ , ಇಂಗು , ಕೇಸರಿ , ಕರ್ಪೂರ ,	ಮನ್ಮಥ	ಪುರುಷೋತ್ತಮ
೨೪.	ಪಾನಕ	ರತಿ ದೇವಿ	ವಿಶ್ವ
೨೫.	ತಾಂಬೂಲ	ಗಂಗಾ ದೇವಿ	ಹರಿ

ಆಹಾರ ಪದಾರ್ಥಗಳನ್ನು ಉಣ್ಣುವಾಗ ಸ್ಮರಿಸಬೇಕಾದ ಭಗವದ್ರೂಪಗಳು		
೧.	ಪರಮಾನ್ನವನ್ನು ಉಣ್ಣುವಾಗ	ಕೃತಿಪತಿ ಪ್ರದುಮ್ನನನ್ನು ಸ್ಮರಿಸಬೇಕು
೨.	ಅನ್ನವನ್ನು ಉಣ್ಣುವಾಗ	ಮಾಯಾಪತಿ ವಾಸುದೇವನನ್ನು ಸ್ಮರಿಸಬೇಕು
೩.	ಕಾಯಿಪಲ್ಯಗಳನ್ನು ಉಣ್ಣುವಾಗ	ವಾಮನ , ಧನ್ವಂತ್ರಿಯರನ್ನು ಸ್ಮರಿಸಬೇಕು
೪.	ತೊವ್ವೆ ಹುಳಿಗಳನ್ನು	ಗರುಡಾರೂಢ ನಾರಾಯಣನನ್ನು ಸ್ಮರಿಸಬೇಕು
೫.	ಭಕ್ಷಗಳನ್ನು ಉಣ್ಣುವಾಗ	ಜಯಾಪತಿ ಸಂಕರ್ಷಣ, ಅಚ್ಚುತರನ್ನು ಸ್ಮರಿಸಬೇಕು
೬.	ಬೆಣ್ಣೆ ತುಪ್ಪಗಳನ್ನು	ಶಾಂತೀಪತಿ ಅನಿರುದ್ದ , ತಾಂಡವ ಕೃಷ್ಣರನ್ನು
೭.	ಎಣ್ಣೆಯಲ್ಲಿ ಕರಿದಪದಾರ್ಥಗಳು	ವೈಕುಂಠಪತಿ ವೆಂಕಟೇಶನನ್ನು ಸ್ಮರಿಸಬೇಕು
೮.	ಮೊಸರನ್ನವನ್ನು ಉಣ್ಣುವಾಗ	ಶ್ರೀನಿವಾಸನನ್ನು ಸ್ಮರಿಸಬೇಕು
೯.	ಹಣ್ಣುಗಳನ್ನು ಉಣ್ಣುವಾಗ	ಬಾಲಕೃಷ್ಣನನ್ನು ಸ್ಮರಿಸಬೇಕು
೧೦.	ನೀರು ಕುಡಿಯುವಾಗ	ವಿಷ್ಣುವನ್ನು ಸ್ಮರಿಸಬೇಕು
೧೧.	ತುತ್ತು ತುತ್ತಿಗೂ	ಗೋವಿಂದಾ ಗೋವಿಂದಾ ಎಂದು ಸ್ಮರಿಸಬೇಕು

ಸಪ್ತರ್ಷಿಗಳು – ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ,

ನವಗ್ರಹಗಳು :

ನಮ:ಸೂರ್ಯಾಯ ಚಂದ್ರಾಯ ಮಂಗಳಾಯ ಬುಧಾಯಚ ।
ಗುರುಶುಕ್ರಶನಿಭ್ಯಶ್ಚ ರಾಹವೇ ಕೇತವೇ ನಮ: ॥

ನಕ್ಷತ್ರಗಳ ಸಂಖ್ಯೆ – 27 ಪಕ್ಷಗಳು – 2
ಋತುಗಳ ಸಂಖ್ಯೆ – 6 ಮಾಸಗಳ ಸಂಖ್ಯೆ – 12

ನಿತ್ಯ ಕರ್ಮಗಳಲ್ಲಿ ಭಗದ್ರೂಪಗಳ ಚಿಂತನೆ	ಭಗವಂತನ ರೂಪ
ಪ್ರಾತಃ ಕಾಲದಲ್ಲಿ ಏಳುವಾಗ	ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ನಾರಾಯಣಾಯ ನಮಃ
ಮಲಮೂತ್ರ ವಿಸರ್ಜನೆಯ ಕಾಲ	ಕೇಶವಾಯನಮಃ
ಮೃತ್ತಿಕಾ ಶೌಚ ಕಾಲದಲ್ಲಿ	ತ್ರಿವಿಕ್ರಮಾಯನಮಃ
ಹಲ್ಲು ಉಜ್ಜುವಾಗ	ಶ್ರೀಹರಯೇ ನಮಃ
ಮುಖ ತೊಳೆಯುವಾಗ	ಶ್ರೀಮಾದವಾಯನಮಃ
ಆಕಳಿಗೆ ನಮಸ್ಕರಿಸುವಾಗ	ಉದ್ಗೀಥಾಭಿನ್ನ ಶ್ರೀಕೃಷ್ಣಾಯ ನಮಃ
ಹಾಲು ಕರೆಯುವಾಗ	ಗೋಪಾಲಕೃಷ್ಣಾಯನಮಃ
ತುಳಸಿಗೆ ನಮಸ್ಕರಿಸುವಾಗ	ವಿಷ್ಣುವೇ ನಮಃ
ಸ್ನಾನ ಮಾಡುವಾಗ	ತ್ರಿವಿಕ್ರಮ ವರಹಾಭಿನ್ನದ್ರವರೂಪಿಯಾದ ಶ್ರೀಹರಯೇ ನಮಃ
ವಸ್ತ್ರ ಉಡುವಾಗ	ಉಪೇಂದ್ರಾಯನಮಃ
ಆಹ್ನೀಕಕ್ಕೆ ಕೊಡುವಾಗ	ಶನೈಶ್ಚರಾಂತರ್ಗತ ಕೃಷ್ಣಾಯ ನಮಃ
ಗೋಪಿಚಂದನ ಧರಿಸುವಾಗ	ರತಿಪತಿ ಮನ್ಮಥಾಂತರ್ಗತ ಉಮಾಪತಿ ರುದ್ರಾಂತರ್ಗತ ಭೂ ವರಹಾಯನಮಃ
ದ್ವಾದಶನಾಮಗಳನ್ನು ಧರಿಸುವಾಗ	ಶುಕ್ಲ ಪಕ್ಷದಲ್ಲಿ ಕೇಶವಾದಿ ದಾಮೋದರ ಪರ್ಯಂತ ೧೨ ನಾಮಗಳನ್ನು ಸ್ಮರಿಸಬೇಕು. ಕೃಷ್ಣ ಪಕ್ಷದಲ್ಲಿ ಸಂಕರ್ಷಣಾದಿ ಶ್ರೀಕೃಷ್ಣಾಂತವಿರುವ ೧೨ ನಾಮಗಳನ್ನು ಸ್ಮರಿಸಬೇಕು.
ಚಕ್ರಮುದ್ರೆ ಧರಿಸುವಾಗ	ಕರ್ಮಾಂತರ್ಗತ ದ್ಯುನಾಮಕ ಹಿಂಕಾರಾಭಿನ್ನ ಕೃದ್ಧೋಲ್ಕಾಯ ನಮಃ
ಶಂಕಮುದ್ರೆ ಧರಿಸುವಾಗ	ಪೃಥ್ವಿನಾಮಕ ಭಾರತೀಪತಿ ಅಪಾನಾಂತರ್ಗತ ಅಂಭೃಣೀಪತಿ ಮಹೋಲ್ಕಾಯ ನಮಃ

ಗದಾಮುದ್ರೆ ಧರಿಸುವಾಗ	ದಿಙ್ ನಾಮಕ ಭಾರತೀಪತಿ ವ್ಯಾನಂತರ್ಗತ ಲಕ್ಷ್ಮೀಪತಿ ನಿದಾನಭಿನ್ನ ವೀರೋಲ್ಕಾಯ ನಮಃ
ನಾರಾಯಣಮುದ್ರೆ ಧರಿಸುವಾಗ	ವಿದ್ಯುನ್ನಾಮಕ ಭಾರತೀಪತಿ ಸಮಾನಾಂತರ್ಗತ ಜಯಂತೀಪತಿ ಉದ್ಗೀಥಾಭಿನ್ನ ಸಹಸ್ರೋಲ್ಕಾಯ ನಮಃ
ನಿರ್ಮಾಲ್ಯತೀರ್ಥ ತೆಗೆದುಕೊಳ್ಳುವಾಗ	ವಿಶ್ವಾಯನಮಃ, ತೈಜಸಾಯನಮಃ, ಪ್ರಾಜ್ಞಾಯನಮಃ
ನಿರ್ಮಾಲ್ಯತೀರ್ಥ ಪ್ರೋಕ್ಷಿಸುವಾಗ	ತುರ್ಯಾಭಿನ್ನ ಮುಕುಂದಾಯನಮಃ
ಸಂಧ್ಯಾವಂದನೆ ಮಾಡುವಾಗ	ಶ್ರೀರಾಮಾಯನಮಃ
ಯಜ್ಞೋಪವೀತಧಾರಣ ಕಾಲದಲ್ಲಿ	ಶ್ರೀವಾಮನಾಯನಮಃ
ಶಂಖೋದಕವನ್ನು ಪ್ರೋಕ್ಷಿಸಿಕೊಳ್ಳುವಾಗ	ಮುಕುಂದಾಯನಮಃ
ತೀರ್ಥ ತೆಗೆದುಕೊಳ್ಳುವಾಗ	ರಾಮಾಯನಮಃ, ಕೃಷ್ಣಾಯನಮಃ, ವೇದವ್ಯಾಸಾಯನಮಃ
ಭಜನೆ ಮಾಡುವಾಗ	ಯೋಗೀಶ್ವರಾಯನಮಃ
ತುಳಸಿಯನ್ನು ಧರಿಸುವಾಗ, ತಿನ್ನುವಾಗ	ರಾಮಾಯನಮಃ
ಗುರುಹಿರಿಯರಿಗೆ ನಮಿಸುವಾಗ	ಗರುಡಾಂತರ್ಗತ ಶ್ರೀಹರಯೇ ನಮಃ
ಪ್ರದಕ್ಷಿಣೆ ಮಾಡುವಾಗ	ಶೇಷಾಂತರ್ಗತ ಹರಯೇ ನಮಃ
ದಾನ ಕೊಡುವಾಗ	ಪರಶುರಾಮಯನಮಃ
ದಾನ ತೆಗೆದುಕೊಳ್ಳುವಾಗ	ಶ್ರೀವಾಮನಾಯನಮಃ
ಹಾದಿಯಲ್ಲಿ ನಡೆಯುವಾಗ	ಭೂ ವರಹಾಯನಮಃ
ನದಿಗಳನ್ನು ದಾಟುವಾಗ, ನೀರಿನಲ್ಲಿರುವಾಗ	ಮತ್ಸ್ಯಾಯನಮಃ

ಅಡವಿಯಲ್ಲಿ ಪ್ರಯಾಣಿಸುವಾಗ	ನಾರಸಿಂಹಾಯನಮಃ
ಆಕಾಶದಲ್ಲಿ ಪ್ರಯಾಣಿಸುವಾಗ	ತ್ರಿವಿಕ್ರಮಾಯನಮಃ
ಪರ್ವತದಲ್ಲಿ ನಡೆಯುವಾಗ	ಪರಶುರಾಮಯನಮಃ
ರೋಗಾದಿಗಳು ಬಂದಾಗ	ಧನ್ವಂತರಯೇ ನಮಃ
ಔಷದಿ ತೆಗೆದುಕೊಳ್ಳುವಾಗ	ವೈದ್ಯರೂಪಿ ನಾರಾಯಣಾಯ ನಮಃ
ಹೂವು ಮುಡಿಯುವಾಗ	ಕಪಿಲಾಯ ನಮಃ
ಮಗುವನ್ನು ಮುದ್ದಿಸುವಾಗ	ಕೃಷ್ಣಾಯ ನಮಃ
ತಾಂಬೂಲ ಮೆಲ್ಲುವಾಗ	ಪ್ರದ್ಯುಮ್ನಾಯನಮಃ
ಆಟಗಳನ್ನು ಆಡುವಾಗ	ಗೋವಿಂದಾಯನಮಃ
ಆನಂದದಲ್ಲಿರುವಾಗ, ಹರಿಕಥೆ ಕೇಳುವಾಗ	ಹಯವದನಾಯನಮಃ, ವೇದವ್ಯಾಸಾಯನಮಃ
ರತಿಕ್ರೀಡೆಯಲ್ಲಿರುವಾಗ	ಗೋಪೀಜನಜಾರ ಕೃಷ್ಣಾಯ ನಮಃ
ಮಲಗುವಾಗ	ಪದ್ಮನಾಭಾಯನಮಃ

ಅಡಿಗೆಯ ಉಪಕರಣಗಳಲ್ಲಿ ಭಗವದ್ರೂಪಗಳು		
೧.	ಅಡಿಗೆ ಮಾಡುವ ಒಲೆಗಳಲ್ಲಿ	ಅಗ್ನಿಯೇ ನಮಃ , ಭಾರ್ಗವಾಯ ನಮಃ
೨.	ಕುರುಳು , ಕಟ್ಟಿಗೆ , ಇದ್ದಲುಗಳು	ವಸಂತ , ಭಾರ್ಗವ
೩.	ಅಡಿಗೆ ಮಾಡುವ ಪಾತ್ರೆಗಳಲ್ಲಿ	ವಾರುಣಿ , ಅನಂತ
೪.	ಭೋಜನ ಮಾಡುವ ಬಾಳೆಎಲೆ, ಮುಂತಾದವುಗಳು	ದುರ್ಗಾ , ಸತ್ಯ
೫.	ತುಪ್ಪದ ಬಟ್ಟಲಿನಲ್ಲಿ	ಸೌಪರ್ಣಿ , ದತ್ತ

ನಿತ್ಯ ತೃಪ್ತನಿಗೆ ಆಹಾರಪದಾರ್ಥಗಳನ್ನು ಸಿದ್ದಗೊಳಿಸುವ ನಿರ್ಜರರು		
೧.	ಅನ್ನವನ್ನು	ಸರಸ್ವತಿ ಪರಮೇಷ್ಟಿಯರು ಮಾಡುತ್ತಾರೆ
೨.	ತೊವ್ವೆಯನ್ನು	ಶ್ರೀದೇವಿಯು ಮಾಡುತ್ತಾಳೆ
೩.	ಭಕ್ಷಗಳನ್ನು	ಚತುರ್ಮುಖ ಬ್ರಹ್ಮದೇವರು ಮಾಡುತ್ತಾರೆ
೪.	ಪರಮಾನ್ನವನ್ನು	ಭಾರತೀದೇವಿಯರು ಮಾಡುತ್ತಾರೆ
೫.	ಕಾಯಿಪಲ್ಯಗಳನ್ನು	ಚಂದ್ರ ದೇವರು ಮಾಡುತ್ತಾರೆ
೬.	ಅಡಿಗೆ ಮಾಡುವವರಲ್ಲಿ ಶ್ರೀದೇವಿ ಇರುತ್ತಾಳೆ . ಅವಳಲ್ಲಿ ವಿಶ್ವಂಭರ ನಾಮಕ ಪರಮಾತ್ಮನು ಇರುತ್ತಾನೆ .	
೭.	ನೈವೇದ್ಯಕ್ಕಾಗಿ ಆಹಾರ ಪದಾರ್ಥಗಳನ್ನು ಇಡುವ ಮಂಡಲದಲ್ಲಿ ಭೂದೇವಿಯು ಇರುತ್ತಾಳೆ. ಅವಳ ಅಂತರ್ಯಾಮಿಯಾಗಿ ಭೂವರಾಹ ದೇವರು ಇರುತ್ತಾರೆ .	
೮.	ಕರ್ಮಾಭಿಮಾನಿಯಾದ ಪುಷ್ಕರನು ಮಾಡಿದ ಪದಾರ್ಥಗಳನ್ನು ಶುದ್ಧಿ ಮಾಡುವನು .	
೯.	ಆಹಾರ ಪದಾರ್ಥಗಳ ಮೇಲೆ ಹೊದಿಸುವ ಬಟ್ಟೆಯಲ್ಲಿ ಗಣಪತಿ ಹಾಗೂ ಸನತ್ಕುಮಾರರಿರುತ್ತಾರೆ	
೧೦.	ಆಹಾರ ಪದಾರ್ಥಗಳಲ್ಲಿ ಹಾಕುವ ತುಳಸಿಯಲ್ಲಿ ಶ್ರೀ ರಮಾದೇವಿಯು ಇರುತ್ತಾಳೆ . ಇವಳ ಅಂತರ್ಯಾಮಿಯಾಗಿ ಕಪಿಲನಿರುತ್ತಾನೆ .	
೧೧.	ನೈವೇದ್ಯ ಇಟ್ಟಾಗ ಹಾಕಿದ ಪರದೆಯಲ್ಲಿ ವಿಷ್ವಕ್ಸೇನನು ಇರುತ್ತಾನೆ. ಇವನಲ್ಲಿ ಅಂತರ್ಯಾಮಿಯಾಗಿ ಪುರುಷನಾಮಕ ಪರಮಾತ್ಮ ಇರುತ್ತಾನೆ.	

ಹರಿಕಥಾಮೃತಸಾರ – ಭೋಜನರಸವಿಭಾಗಸಂಧಿ

೧. ವನಜಜಾಂಡ ಎಂದರೇನು ? – **ಬ್ರಹ್ಮಾಂಡ,**

೨. ಶ್ರೀಹರಿಯು ಯಾವ ರೂಪದಿಂದ ಅನ್ನದಲ್ಲಿರುವನು ?

ವಾಸುದೇವರೂಪದಿಂದ

೩. ಬೃಹತೀಸಹಸ್ರದಲ್ಲಿ ಎಷ್ಟು ಭಗವದ್ರೂಪವಿದೆ – **72000**

೪. ಸಿಹಿಪದಾರ್ಥಗಳಿಗೆ ಅಭಿಮಾನಿ ದೇವತೆ ಮತ್ತು ಭಗವದ್ರೂಪ

ಇಂದ್ರಾ, ವಾಸುದೇವ

೫. ಕ್ರೋಡರೂಪಿ ಪರಾಮಾತ್ಮ ಎಂದರೆ – **ವರಾಹರೂಪಿ ಪರಮಾತ್ಮ**

೬. ನಾಸಿಕದಲ್ಲಿ ಶ್ರೀಹರಿಯು ಯಾವ ರೂಪದಲ್ಲಿ ನೆಲೆಸಿರುತ್ತಾನೆ ? **ನರಹರಿ**

೭. ನವನೀತದ ಅಭಿಮಾನಿ ಯಾರು ? – **ಮುಖ್ಯಪ್ರಾಣ**

೮. ಅನಿರುದ್ಧನು ಎಷ್ಟು ರೂಪಗಳಿಂದ ಪ್ರಾಣನ ಶರೀರದಲ್ಲಿರುವನು –**53**

೯. ಪಂಚ ಭೂತಗಳಲ್ಲಿ " ವಾಯು " – **ಸರ್ವಸ್ಪರ್ಶಾಶ್ರಯ**

೧೦. ಪಂಚಪ್ರಾಣರಲ್ಲಿ ಶ್ರೀಹರಿಯ ರೂಪಗಳ ಒಟ್ಟು ಸಂಖ್ಯೆ – **1711**

೧೧. ಶ್ರೀಹರಿಯು ಯಾವ ರೂಪದಿಂದ ಘೃತದಲ್ಲಿರುವನು – **ಅನಿರುದ್ಧ ,**

೧೨. ಪಂಚ ಭೂತಗಳಲ್ಲಿ " ಪೃಥ್ವಿಯು " – **ಗಂಧಾಶ್ರಯ**

೧೩. ಉಪ್ಪಿಗೆ ಅಭಿಮಾನಿ ದೇವತೆ ಮತ್ತು ಭಗವದ್ರೂಪ – **ನಿರಋತಿ , ಜನಾರ್ದನ**

೧೪. ಮಾತಿನಲ್ಲಿ ಶ್ರೀಹರಿಯು ಯಾವ ರೂಪದಲ್ಲಿ ನೆಲೆಸಿರುತ್ತಾನೆ ? – **ಹಯಗ್ರೀವ**

೧೫. ನೀಡದಂದದಲಿಪ್ಪ ಎಂದರೆ ಯಾವುದು ? – **ಸ್ಥೂಲ ದೇಹ**

೧೬. ಬೃಹತೀ ಎಂದು ಯಾರನ್ನು ಕರೆಯುತ್ತಾರೆ ? – **ಪರಮಾತ್ಮ**

೧೭. ಹುಳಿ ಇರುವ ಪದಾರ್ಥಗಳಿಗೆ ಅಭಿಮಾನಿ ದೇವತೆ ಮತ್ತು ಭಗವದ್ರೂಪ –

– **ಗೌರಿ ದಾಮೋದರ**

೨೦. ಪಿತೃಗಳಿಗೆ ಪ್ರಿಯವಾದ __________ ಸಂಖ್ಯೆಯ ಶ್ರಾದ್ಧಗಳಿಗೆ ನಿಯಾಮಕ

ರೂಪವನ್ನು ಷಣ್ಣವತಿ ರೂಪಗಳೆಂದು ಹೆಸರು – **96**

ಅರ್ಜುನನ ರಥದ ಬಾವುಟದಲ್ಲಿರುವ ದೈವ	ಹನುಮಂತದೇವರು
ದ್ರೌಪದಿಯ ತಂದೆ ಯಾರು?	ದ್ರುಪದರಾಜ
ಶ್ರೀಮದಾಚಾರ್ಯರ ಗುರುಗಳು	ಅಚ್ಯುತ ಪ್ರೇಕ್ಷಾಚಾರ್ಯರು
ವಿಜಯದಾಸರ ಜನ್ಮ ಸ್ಥಳ	ಚೀಕಲಪರವಿ
ರಾಯರ ಮಂಗಳಾಷ್ಟಕದ ರಚಕರು	ಅಪ್ಪಣ್ಣಾಚಾರ್ಯರು
"ಕೃಷ್ಣಾ ನೀ ಬೇಗನೆ ಬಾರೋ" ಇದು ಯಾರ ರಚನೆ?	ವ್ಯಾಸರಾಜರು
ವಿರಾಟರಾಜನ ಮಗಳನ್ನು ಯಾರು ವಿವಾಹವಾದರು	ಅಭಿಮನ್ಯು
ಶ್ರಾವಣ ಬಹುಳ ಬಿದಿಗೆ ಯಾರ ಆರಾಧನೆ	ರಾಯರು
ಕೃಷ್ಣದೇವರಾಯನಿಗೆ "ಕುಹುಯೋಗ" ಪರಿಹಾರ ಮಾಡಿದವರು	ವ್ಯಾಸರಾಜರು
"ವಾಗ್ವಜ್ರ" ಇದು ಯಾರ ಗ್ರಂಥ	ಶ್ರೀಪಾದರಾಜರು

ಅರ್ಜುನನು ಯಾರ ಅವತಾರ	ಇಂದ್ರ
ವ್ಯಾಸರಾಜರ ವೃಂದಾವನ ಇರುವುದು	ನವವೃಂದಾವನ
ಪರೀಕ್ಷಿತರಾಜರಿಗೆ ಶಾಪ ಕೊಟ್ಟ ಮುನಿಪುತ್ರ	ಶೃಂಗಿ
ಹಿರಣ್ಯಕಶಿಪುವಿನ ಹೆಂಡತಿ ಹೆಸರು	ಕಯಾದು
ದುಷ್ಯಂತ ಶಕುಂತಲೆಯರ ಮಗ	ಭರತ
ಹನುಮಂತದೇವರನ್ನು ವರ್ಣಿಸುವ ರಾಮಾಯಣ ಕಾಂಡ	ಸುಂದರಕಾಂಡ
ರಾಯರ ಗುರುಗಳು	ಸುಧೀಂದ್ರರು
ಈಗ ಚಾಲ್ತಿಯಲ್ಲಿರುವ ಸಂವತ್ಸರ	ಸರ್ವಧಾರಿ
"ರುಕ್ಮಿಣೀಶವಿಜಯ" ಗ್ರಂಥಕರ್ತರು	ವಾದಿರಾಜರು
ಪುರಂದರದಾಸರ ಪುಣ್ಯ ತಿಥಿ	ಪುಷ್ಯ ಬಹುಳ ಅಮಾವಾಸ್ಯೆ

೩.

ಪಾಂಡವರು ಅಜ್ಞಾತವಾಸದಲ್ಲಿದ್ದ ಸ್ಥಳ	ವಿರಾಟನಗರ
ಅಕ್ಷೋಭ್ಯತೀರ್ಥರ ವೃಂದಾವನ ಇರುವುದು	ಮಳಖೇಡ
ರಾಯರ ಮೂಲರೂಪ	ಶಂಕುಕರ್ಣ
ಜಗನ್ನಾಥದಾಸರ ಜನ್ಮನಾಮ	ಶ್ರೀನಿವಾಸಾಚಾರ್ಯರು
" ಸ್ಕಂಧ " ಎಂದು ಯಾರನ್ನು ಕರೆಯುತ್ತಾರೆ	ಸುಬ್ರಮಣ್ಯ
ಅಜ್ಞಾತವಾಸ ಕಾಲದಲ್ಲಿ ಅರ್ಜುನನ ಹೆಸರೇನು	ಬೃಹನ್ನಳೆ
ಜಗನ್ನಾಥದಾಸರಿಗೆ ಆಯಸ್ಸು ಪ್ರಧಾನ ಮಾಡಿದವರು	ಗೋಪಾಲದಾಸರು
ಕನಕದಾಸರ ಅಂಕಿತ	ಆದಿ/ಬಾಡದಾದಿ ಕೇಶವ
ರಾವಣನ ಪತ್ನಿ	ಮಂಡೋಧರಿ
ಹಿಂದೂ ಸಂವತ್ಸರಗಳ ಸಂಖ್ಯೆ	**60**

೪.

ಶುಕಾಚಾರ್ಯರು ಯಾರ ಮಗ	ವೇದವ್ಯಾಸರು
ವ್ಯಾಸರಾಜರು ಎಷ್ಟು ಪ್ರಾಣದೇವರ ವಿಗ್ರಹಗಳನ್ನು ಪ್ರತಿಷ್ಠೆ ಮಾಡಿದ್ದಾರೆ	**732**
ಸಮುದ್ರಮಥನದಲ್ಲಿ ಅಮೃತವನ್ನು ತಂದ ರೂಪ	ಧನ್ವಂತರಿ
ರಾವಣ ಎಲ್ಲಿಯ ರಾಜನಾಗಿದ್ದ	ಲಂಕಾ
ಜನಮೇಜಯ ಮಾಡಿದ ಯಾಗ ಯಾವುದು	ಸರ್ಪಯಾಗ
ಅಹಲ್ಯೆಗೆ ಶಾಪವನ್ನಿತ್ತ ಮುನಿ ಯಾರು	ಗೌತಮರು
ಸತ್ಯಾತ್ಮತೀರ್ಥರ ಆಶ್ರಮ ಗುರುಗಳು ಯಾರು	ಸತ್ಯಪ್ರಮೋದತೀರ್ಥರು
ಶ್ರೀರಾಮನು ಹುಟ್ಟಿದ ಮಾಸ ಮತ್ತು ದಿನ	ಚೈತ್ರ ಶುಕ್ಲ ನವಮಿ
ರಾಯರ ಪರಮಗುರುಗಳು ಯಾರು	ವಿಜೀಂದ್ರರು
ಶ್ರೀಪಾದರಾಜರ ಪೂರ್ವಾಶ್ರಮ ನಾಮ	ಲಕ್ಷ್ಮೀನಾರಾಯಣ ಮುನಿ

೫.

ಇಂದ್ರನ ವಾಹನ	ಐರಾವತ
ದೈತ್ಯರಾಜ ಬಲಿಚಕ್ರವರ್ತಿಯ ಗುರುಗಳು	ಶುಕ್ರಾಚಾರ್ಯರು
"ಸುಮಧ್ವವಿಜಯ" ರಚಿಸಿದವರು	ನಾರಾಯಣ ಪಂಡಿತಾಚಾರ್ಯರು
ಪರೀಕ್ಷಿತನಿಗೆ ಬ್ರಹ್ಮಾಸ್ತ್ರ ಉಪಯೋಗಿಸಿದವನು	ಅಶ್ವತ್ತಾಮ
ಕುಂತಿಯ ಸೇವೆಗೆ ಮೆಚ್ಚಿ ವರವನ್ನು ನೀಡಿದ ಮುನಿ	ದೂರ್ವಾಸರು
ದಶರಥನ ಕುಲಪುರೋಹಿತರು	ವಸಿಸ್ಠರು
ಬ್ರಹ್ಮಣ್ಯತೀರ್ಥರ ವೃಂದಾವನ ಇರುವುದು	ಅಬ್ಬೂರು
ಜಗನ್ನಾಥದಾಸರ ಜನ್ಮ ಸ್ಥಳ	ಮಾನ್ವಿ
ಕಾವೇರಿಯ ಉಗಮಸ್ಥಾನ ಯಾವುದು	ತಲಕಾವೇರಿ
ಶ್ರೀಕೃಷ್ಣ ಪತ್ನಿ ಸತ್ಯಭಾಮಾ ಯಾರ ಮಗಳು	ಸತ್ರಾಜಿತ

೬.

ಭಾಗವತದಲ್ಲಿ "ಕೃಷ್ಣಾವತಾರ" ಇರುವ ಅಧ್ಯಾಯ	**10ನೇ ಅಧ್ಯಾಯ**
ಶ್ರೀನಿವಾಸಕಲ್ಯಾಣದಲ್ಲಿ ತ್ರಿಮೂರ್ತಿಗಳನ್ನು ಪರೀಕ್ಷಿಸಿದ ಮುನಿ	ಭೃಗುಮುನಿ
ದೇವೇಂದ್ರನ ವಜ್ರಾಯುಧ ಯಾರ ಎಲುಬಿನಿಂದ ಮಾಡಿದ್ದು	ದಧೀಚಿ ಋಷಿಗಳು
"ಯಮ ಧರ್ಮರಾಜರು" ಎಷ್ಟನೇ ಕಕ್ಷ	**12**
ಸಮುದ್ರಮಥನದಲ್ಲಿ ವಿಷವ ಭಕ್ಷಿಸಿದ್ದರಿಂದ ಶಿವನಿಗೆ ಬಂದ ಹೆಸರು	ನೀಲಕಂಠ
ವಾಯುದೇವರು ಪ್ರತಿದಿನ ಪ್ರತಿಜೀವನಲ್ಲೂ ಎಷ್ಟು ಶ್ವಾಸಜಪ ಮಾಡುತ್ತಾರೆ	**21600**
ಹನುಮಂತದೇವರು ರಾಮನನ್ನು ಭೇಟಿಯಾದ ಸ್ಥಳ	ಋಷ್ಯಮೂಖ
ಪರೀಕ್ಷಿತ್ ಮಹಾರಾಜರಿಗೆ ಶುಕಮುನಿಗಳು ಭಾಗವತ ಉಪದೇಶಿಸಿದ ಸ್ಥಳ	ನೈಮಿಷಾರಣ್ಯ
ಭಾರತೀಪತಿಗಳು ಯಾರು	ವಾಯುದೇವರು
ವಿಜಯದಾಸರ ವ್ಯವಹಾರನಾಮ	ದಾಸಪ್ಪ

೭.

ವಿಷ್ಣು ಸಹಸ್ರನಾಮವನ್ನು ಧರ್ಮರಾಯನಿಗೆ ಉಪದೇಶಿಸಿದವರು	ಭೀಷ್ಮರು
ಪಾಂಡವರು ವನವಾಸದಲ್ಲಿದ್ದಾಗ ಕುಂತಿ ಎಲ್ಲಿದ್ದಳು?	ವಿದುರನ ಮನೆಯಲ್ಲಿ
ವಿದ್ಯಾರಣ್ಯರನ್ನು ವಾಗ್ಯುದ್ದದಲ್ಲಿ ಸೋಲಿಸಿ ದಾಖಲೆ ಬರೆಸಿದ ಮಾಧ್ವ ಯತಿಪುಂಗವ	ಶ್ರೀ ಅಕ್ಷೋಭ್ಯತೀರ್ಥರು
ಶ್ರೀಮದಾಚಾರ್ಯರ ವೃಂದಾವನ ಎಲ್ಲಿದೆ?	ಇಲ್ಲ
ಭೀಮಸೇನದೇವರು ಯಾವ ಪುಷ್ಪವನ್ನು ಗಂಧಮಾಧನ ಪರ್ವತದಿಂದ ತಂದರು	ಸೌಗಂಧಿಕ
ಯಕ್ಷರೂಪದಿಂದ ಪಾಂಡವರನ್ನು ಪ್ರಶ್ನಿಸಿದವರಾರು	ಯಮಧರ್ಮರಾಜರು
ಶ್ರೀಹರಿಗೆ ಸೇರಿದ ದಿನಗಳಾವುವು	ದಶಮಿ, ಏಕಾದಶಿ, ದ್ವಾದಶಿ
ಶ್ರೀಕೃಷ್ಣನು ಯಾರಲ್ಲಿ ೬೪ ವಿದ್ಯೆಗಳನ್ನು ಕಲಿತನು	ಸಾಂದೀಪಿನಾಚಾರ್ಯರು
ಸಮುದ್ರಮಥನದಲ್ಲಿ ಬಂದ ಕೌಸ್ತುಭವನ್ನು ಯಾರು ಧರಿಸಿದರು	ಶ್ರೀಹರಿ

೮.

ವ್ಯಾಸವಿಠಲದಾಸರ ವ್ಯವಹಾರ ನಾಮ	ಕಲ್ಲೂರು ಸುಬ್ಬಣ್ಣಾಚಾರ್ಯರು
ವೇದವ್ಯಾಸರು ರಚಿಸಿದ ಕೊನೆಯ ಪುರಾಣ ಗ್ರಂಥ ಯಾವುದು?	ಶ್ರೀಮದ್ಭಾಗವತ
ಬ್ರಹ್ಮಪುರಾಣವನ್ನು ಬರೆದವರಾರು?	ವೇದವ್ಯಾಸರು
ವ್ಯಾಸರಾಜರು ತಿರುಪತಿ ತಿಮ್ಮಪ್ಪನ ಸನ್ನಿಧಿಯಲ್ಲಿ ಎಷ್ಟು ವರ್ಷಕಾಲ ಪೂಜೆಗೈದರು ?	12
ಬ್ರಹ್ಮಹತ್ಯಾ ದೋಷವನ್ನು ಕಳೆದುಕೊಳ್ಳಲು ಇಂದ್ರ ಅಡಗಿದ್ದ ಸ್ಥಳ	ಮಾನಸ ಸರೋವರ
ಹರಿಕಥಾಮೃತಸಾರದಲ್ಲಿ ಮೋದಚಿನ್ಮಯಗಾತ್ರ ಎಂದು ಯಾರನ್ನು ಸಂಭೋದಿಸಿದ್ದಾರೆ?	ಶ್ರೀ ವೇದವ್ಯಾಸರನ್ನು
ಸಮುದ್ರಮಥನಕಾಲದಲ್ಲಿ ಮಂಧರಪರ್ವತ ಮುಳುಗಿದಾಗ ಅದನ್ನು ಮತ್ತೆ ಮೇಲೆತ್ತಿದ ರೂಪ	ಕೂರ್ಮಾವತಾರ

ಪರಮಾತ್ಮನ ವಿವಿಧ ಅವತಾರ/ರೂಪಗಳು –

- **ಮತ್ಸ್ಯರೂಪ –** ಬ್ರಹ್ಮದೇವರ ಬಳಿಯಿದ್ದ ಸಕಲವೇದ ಮತ್ತು ಅದರ ಅಭಿಮಾನಿದೇವತೆಗಳನ್ನು ಅಪಹರಿಸಿದ, ಶ್ರೀಹಯಗ್ರೀವಾಸುರನನ್ನು ಸಂಹರಿಸಿ, ಅಪಹರಣವಾದ ವೇದಗಳನ್ನು ಬ್ರಹ್ಮದೇವರಿಗಿತ್ತನು ಮತ್ತು ಸತ್ಯವ್ರತಮಹಾರಾಜನಿಗೆ ದರ್ಶನವಿತ್ತು, ಅವನಿಗೆ ಉಪದೇಶಿಸಿದ – ಮತ್ಸ್ಯಪುರಾಣ

- **ಕೂರ್ಮಾವತಾರ** – ಸಮುದ್ರಮಥನ ಕಾಲದಲ್ಲಿ ಮಂದರಪರ್ವತವು ಸಮುದ್ರದ ನೀರಿನಲ್ಲಿ ಮುಳುಗಿದಾಗ ಅದನ್ನು ಮೇಲಕ್ಕೆತ್ತಿದ ರೂಪ.

- **ವರಾಹಾವತಾರ** – ದೇವಶತ್ರುವಾದ ಹಿರಣ್ಯಾಕ್ಷನು ವರಬಲದಿಂದ ಭೂದೇವಿಯನ್ನೇ ನೀರಿನಲ್ಲಿ ಮುಳುಗಿಸಲು, ವರಾಹರೂಪದಿಂದ ಭೂಮಿಯನ್ನು ಮೇಲಕ್ಕೆತ್ತಿದನು.

- **ನರಸಿಂಹಾವತಾರ –** ಭಕ್ತಜನರ ಭಯವನ್ನು ಪರಿಹರಿಸುವ ಈ ನಾರಾಯಣನು, ನರಸಿಂಹನಾಗಿ, ಕಂಭದಲ್ಲಿ ಅವತರಿಸಿ, ತನ್ನ ನಖಚಕ್ರದ ತೇಜಸ್ಸಿನಿಂದಲೇ, ಬಲಶಾಲಿಯಾದ ಹಿರಣ್ಯಕಶಿಪುವನ್ನು ಬ್ರಹ್ಮನವರವು ಸ್ವಲ್ಪವೂ ವ್ಯರ್ಥವಾಗದಂತೆ ಮಾಡಿ, ಪ್ರಹ್ಲಾದನನ್ನು ಸಂರಕ್ಷಿಸಿದ ರೂಪ.

- **ವಾಮನಾವತಾರ** – ಕಶ್ಯಪ–ಅದಿತಿಯರ ಮಗನಾಗಿ ಅವತರಿಸಿ, ದೈತ್ಯ ಚಕ್ರವರ್ತಿ ಬಲಿಯಿಂದ ಮೂರಡಿ ಭೂಮಿಯನ್ನು ಯಾಚಿಸಿ, ಇಂದ್ರಶತ್ರುವನ್ನು "ಸುತಲ" ಲೋಕಕ್ಕೆ ತಳ್ಳಿ ತನ್ನ ಭಕ್ತನಾದ ಇಂದ್ರದೇವರಿಗೆ ಸ್ವರ್ಗಲೋಕವನ್ನು ಮರಳಿ ನೀಡಿದ ರೂಪವೇ ವಾಮನರೂಪ.

- **ಬುದ್ಧಾವತಾರ** – “ಗೌತಮಬುದ್ದ”ನೆಂದು ಪ್ರಸಿದ್ದನಾದ ಬುದ್ಧ ಭಗವದವತಾರಿಯಲ್ಲ. ಅವನು ತ್ರಿಪುರಾಸುರರಲ್ಲಿ ಮೊದಲಿಗನಾದ ದೈತ್ಯ. ಬುದ್ಧರೂಪದಿಂದ ಬಲಿಷ್ಟರಾದ ದೈತ್ಯರನ್ನು ವಂಚಿಸಿ, ನಾಶಪಡಿಸಿ, ದೇವತೆಗಳಿಗೆ ಮೋಕ್ಷದಾಯಕವಾದ ನಿರ್ಮಲ ಜ್ಞಾನವಿತ್ತವನೇ ಬುದ್ಧರೂಪಿ ಪರಮಾತ್ಮ.

- **ಪರಶುರಾಮಾವತಾರ** – ಜಮದಗ್ನಿ ಮತ್ತು ರೇಣುಕಾದೇವಿಯರಲ್ಲಿ ಅವತರಿಸಿ, ತನ್ನ ಶ್ರೇಷ್ಟವಾದ ಕೊಡಲಿಯ ಅಸದೃಶವಾದ ಕಾಂತಿಯಿಂದ ದುಷ್ಟ ಕ್ಷತ್ರಿಯರನ್ನೆಲ್ಲ ಸದೆಬಡಿದು, ಪರಶುರಾಮ ರೂಪಿಯಾದ ನಾರಾಯಣನನ್ನು ಮತ್ತೊಬ್ಬ ಸೂರ್ಯನೆಂದೇ ಜ್ಞಾನಿಗಳು ಕರೆಯುವರು.

- **ವೇದವ್ಯಾಸಾವತಾರ** –ಪರಾಶರ–ಸತ್ಯವತೀ ಸುತನಾಗಿ ಜನಿಸಿ, ಬ್ರಹ್ಮಸೂತ್ರ, ವೇಧಗಳನ್ನು ವಿಭಾಗಿಸಿ, ಭಾಗವತ– ಭಾರತ ಮೊದಲಾದ 18 ಪುರಾಣಗಳನ್ನು ರಚಿಸಿ, ತಮ್ಮ ಮನೋಹರವಾದ ಮಾತುಗಳಿಂದ ದೇವತೆಗಳು ಮತ್ತು ಮನುಷ್ಯರ ಅಜ್ಞಾನವನ್ನು ಮತ್ತೆ ಮತ್ತೆ ಪರಿಹರಿಸಿದ, ಜಗತ್ತಿಗೆ ಹಿತಕಾರಕರಾದ, ಈ ವೇದವ್ಯಾಸದೇವರನ್ನು ಮತ್ತೊಬ್ಬ ಸೂರ್ಯನೆಂದೇ ಜ್ಞಾನಿಗಳು ಕರೆಯುವರು.

- **ರಾಮಾವತಾರ** – ದಶರಥ–ಕೌಸಲ್ಯಾದೇವಿಯರಲ್ಲಿ ಸೂರ್ಯವಂಶದಲ್ಲಿ ಅವತರಿಸಿ, ಕರುಣಾಳುವಾದ ಭಗವಂತನು ದ್ವಿಜವರ್ಯರು, ದೇವತೆಗಳಿಗೆ ಆನಂದವನ್ನುಂಟು ಮಾಡುವವನಾಗಿ ಶತ್ರುನಾಶಕನಾದ ದುಷ್ಟರಾದ ತಾಟಕಾ, ಸುಬಾಹು ರಾವಣಾದಿಗಳನ್ನು ಸಂಹರಿಸಿ, ಶಿವಧನಸ್ಸಿನ ಭಂಗ, ಸೀತಾಸ್ವಯಂವರ, ತಾಯಿಯಾದ ಕೈಕೇಯಿಯ ಅಪೇಕ್ಷೆಯಂತೆ ವನಗಮನ, ಖರದೂಷಣಾದಿನಿಗ್ರಹ, ಅಯೋಧ್ಯಾಗಮನ, ಸುಗ್ರೀವನಿಗೆ ರಾಜ್ಯ ಪ್ರಾಪ್ತಿ, ವಾಲಿಸಂಹಾರ, ಪರಂಧಾಮ ಪ್ರವೇಶ. ವಾಯುದೇವರ ಅವತಾರರಾರರಾದ ಹನುಮಂತನಿಂದ ಈಗಲೂ ನಿತ್ಯ ಸೇವಿತನಾಗಿ ಒಂದು ರೂಪದಿಂದ ಕಿಂಪುರುಷಖಂಡದಲ್ಲಿರುವನು.

- **ಕೃಷ್ಣಾವತಾರ** – ಹಿಂದೆ ದ್ವಾಪರ ಯುಗದ ಕೊನೆಯಲ್ಲಿ ಚಂದ್ರವಂಶದಲ್ಲಿ ಅವತರಿಸಿ ವಸುದೇವ-ದೇವಕಿಯರಿಗೆ ಸಂತೋಷವನ್ನೂ, ದುಷ್ಟ ಕಂಸ, ಜರಾಸಂಧರಿಗೆ ದು:ಖವನ್ನೂ ನೀಡಿದನು. ಪೂತನಾಸಂಹಾರ, ಅಸುರರಾದ ಕೇಶಿ, ಅರಿಷ್ಟಾದಿಗಳ ನಿಗ್ರಹ, ವೃಂದಾವನದಲ್ಲಿ ಸಕಲಗೋಕುಲಕ್ಕೆ ಪ್ರಿಯನಾದ ಶ್ರೀಕೃಷ್ಣ ಕಾಮತಾಪದಿಂದ ಕೂಡಿದ, ಸಲ್ಲಾಪ, ಮಥುರಾಪ್ರವೇಶ, ರುಕ್ಮಿಣೀಕಲ್ಯಾಣ, ನಂದನವನಗಮನ, ನರಾಕಾಸುರಸಂಹಾರ, ದ್ವಾರಕಾಗಮನ, ಗೀತೋಪದೇಶ, ಅರ್ಜುನನ ಸಾರಥಿಯಾಗಿ ನಿಂತು ಸಂಪೂರ್ಣ ಕೌರವಸಂಹಾರ, ಭೀಷ್ಮರಿಂದ ವಿಷ್ಣುಸಹಸ್ರನಾಮ ಸ್ತೋತ್ರ.
- **ಕಲ್ಕಿರೂಪ** – ವಿಷ್ಣುಯಶಸ್ಸ್ ಎಂಬ ಶುದ್ಧಮನಸ್ಸಿನ ಬ್ರಾಹ್ಮಣನಿಂದ **"ಕಲ್ಕಿ"** ನಾಮಕನಾಗಿ ಅವತರಿಸುವನು.

- **ಶ್ರೀಹಯಗ್ರೀವರೂಪ**ದಿಂದ **"ಮಧು-ಕೈಟಭ"** ನಾಮಕ ದೈತ್ಯನನ್ನೂ ಸಂಹರಿಸಿ, ಬ್ರಹ್ಮದೇವರಿಂದ ಅಪಹರಿಸಲ್ಪಟ್ಟ ವೇದಸಮುಚ್ಚಯವನ್ನೂ ಬ್ರಹ್ಮದೇವರಿಗೆ ಮತ್ತೆ ಕೊಟ್ಟ ರೂಪ
- **ತಾಪಸಾವತಾರ**– ಪುರುಷೋತ್ತಮನೂ, ಭಕ್ತಜನ ಭಯಪರಿಹಾರಕನೂ ಆದ ಈ ನಾರಾಯಣನು ಕೋಪ ಉದಿಸಲು, **"ತಾಪಸ"** ರೂಪದಿಂದ ತನ್ನ ತೀಕ್ಷ್ಣವಾದ ಚಕ್ರದಿಂದ ತುಂಬಾ ಬಲಶಾಲಿಯಾಗಿದ್ದ ಮೊಸಳೆಯನ್ನು ಸರೋವರದಿಂದ ಮೇಲಕ್ಕೆಳೆದು ಗಜೇಂದ್ರನನ್ನು ಸಂರಕ್ಷಿಸಿದ ರೂಪವೇ ತಾಪಸಾವತಾರ
- **ಮಹಿದಾಸರೂಪ** – ಶ್ರೀಮನ್ನಾರಾಯಣನು ವಿಷ್ಣುಕೀರ್ತನದಿಂದ ಶುದ್ಧಾಂತಕರಣನಾಗಿದ್ದ ಒಬ್ಬ ಪ್ರಸಿದ್ದ ಬ್ರಾಹ್ಮಣನಿಂದ ಇತರಾದೇವಿಯಲ್ಲಿ ಮಹಿದಾಸ ಪೂಜ್ಯ ಚರಣನಾಗಿ ಅವತರಿಸಿದ.

ಐತರೇಯಶ್ರುತಿ ಮೊದಲಾದ ಸಚ್ಛಾಸ್ತ್ರಗಳನ್ನು ನೆಲೆಗೊಳಿಸಿದ ಅವತಾರವೇ **ಮಹಿದಾಸಾವತಾರ**.

- ಯಜ್ಞರೂಪ – ನಾರಾಯಣನು ಪಾಪದ ಕೊಳಕಿಲ್ಲದ, ಉತ್ತಮ ತಪಸ್ವಿಯಾದ "ರುಚಿ" ಪ್ರಜಾಪತಿಯಿಂದ, ಸ್ವಾಯಂಭುವಮನುವಿನ ಪುತ್ರಿಯಾದ "ಅಕೂತಿ"ಯಲ್ಲಿ ಪುತ್ರನಾಗಿ "ಯಜ್ಞ"ನೆನಿಸಿದ. ಕಾಲಾಂತರದಲ್ಲಿ ದೇವೇಂದ್ರಪದದಲ್ಲಿದ್ದು, ತನ್ನಲ್ಲಿ ಬಹುಭಕ್ತಿಭರಿತರಾದ ದೇವತೆಗಳನ್ನು ಹುಟ್ಟಿಸಿದ. – **ಯಜ್ಞರೂಪ**
- ಕಪಿಲರೂಪ –ಕರ್ದಮಪ್ರಜಾಪತಿಯಿಂದ ಸ್ವಾಯಂಭುವಮನುಪುತ್ರಿಯಾದ ದೇವಹುತಿಯ ಪುತ್ರ ಕಪಿಲನಾಗಿ ಅವತರಿಸಿ – ಸಾಂಖ್ಯಸಿದ್ಧಾಂತದ ಉಪದೇಶ ಮಾಡಿದ.
- ಧನ್ವಂತರೀರೂಪ ವರ್ಣನೆ – ಸಮುದ್ರಮಥನ ಕಾಲದಲ್ಲಿ ನವಯೌವ್ವನೋಪೇತರಾಗಿ ಧನ್ವಂತರೀರೂಪದಿಂದ ಬಂದು ಅಮೃತವ ತಂದ ರೂಪ.
- ಮೋಹಿನೀರೂಪ – ಆ ಅಮೃತವನ್ನು, ದೈತ್ಯರು ವಶಪಡಿಸಿಕೊಳ್ಳಲು, ಉತ್ತಮ ಸ್ತ್ರೀರೂಪದಿಂದ ಅಸುರರು ಕಿತ್ತುಕೊಂಡಿದ್ದ ಅಮೃತವನ್ನು ದೇವಸಮೂಹಕ್ಕೆ ನೀಡಿದರೂಪ.
- ದತ್ತಾತ್ರೇಯರೂಪ – ಅತ್ರಿ–ಅನುಸೂಯಾ ದಂಪದಿಗಳಲ್ಲಿ "ದತ್ತ"ನಾಗಿ ಅವತರಿಸಿದನು.
- ಕುಮಾರರೂಪ – ಮುನಿಶ್ರೇಷ್ಟರಿಂದ ಧ್ಯಾನಿಸಲ್ಪಟ್ಟಾವನಾಗಿ, ಸಜ್ಜನರಿಗೆ ಮುಕ್ತಿ ಪದವನ್ನು ಕರುಣಿಸುವ ಮನ:ಶುದ್ದಿಯನ್ನು ಒದಗಿಸುವ "ಕುಮಾರ"ರೂಪವನ್ನು ತಾಳಿದ.

- ಋಷಭರೂಪ – ನಾಭಿರಾಜನ ಮಗನಾಗಿ ಅವತರಿಸಿ, ಅವಧೂತಚರ್ಯೆಯನ್ನು ಶಿಕ್ಷಣ ಮಾಡಿದ ರೂಪ. ಇವನ ಮಗನೇ ಜಡಭರತ.
- ಹಂಸರೂಪ – ಹಂಸರೂಪದಿಂದ ಸನಕಾದಿ ಉತ್ತಮ ಅಧಿಕಾರಿಗಳಿಗೆ ತತ್ತ್ವಜ್ಞಾನವನ್ನು ಉಪದೇಶಿಸಿದನು. ಎಲ್ಲಾ ಪರಮಹಂಸಾಶ್ರಮಕ್ಕೂ ಮೂಲ.
- ನಾರಾಯಣರೂಪ, ಹರಿರೂಪ, ಕೃಷ್ಣರೂಪ – "ನರ"ನೆಂಬ ಶೇಷದೇವರ ಸಹೋದರನಾಗಿ, ಯಮಧರ್ಮನಾಗಿ ಪ್ರಾದುರ್ಭವಿಸಿರುವನು – ನಾರಾಯಣಾವತಾರ.

  ಅನಂತರ ಆ ರೂಪಕ್ಕೆ ಸಹೋದರನಾಗಿ "ಹರಿ" ಎಂಬ ಹೆಸರಿನಿಂದ – ಅವತಾರ.

  ಇವನೇ ಸ್ವತ: ಸಜ್ಜನರ ಸಂತೋಷಕ್ಕೆಂದು "ಕೃಷ್ಣ" ಎಂಬ ಹೆಸರಿನಿಂದ "ಕೃಷ್ಣಾವತಾರ"

- ಪರಮಾತ್ಮನ ದಶ–ಶತ–ಸಹಸ್ರ–ಅನಂತರೂಪಗಳ ಹಿರಿಮೆ.
- *ಪರಮಾತ್ಮನೇ ಸತತಮೇಕರೂಪಿಣೇ ದಶರೂಪಿಣೇ ಶತಸಹಸ್ರರೂಪಿಣೇ । ಅವಿಕಾರಿಣೇ ಸ್ಫುತಮನಂತರೂಪಿಣೇ ಸುಖಚಿತ್ಸಮಸ್ತತನವೇ ನಮೋ ನಮ: ॥*

ನಾವು ಉಸಿರಾಡುವ ಪರಿ ಈರೀತಿ ಇದೆ –

1 ಘಳಿಗೆ (24 ನಿಮಿಷ) = 360

(ಅಂದರೆ ಪ್ರತಿ ಘಳಿಗೆಗೆ 360 ಸಲ ಉಸಿರಾಡುತ್ತೇವೆ)

12 ಘಂಟೆ (4 ಯಾಮ) = 10800

(ಅರ್ಧ ದಿನಕ್ಕೆ 10800 ಸಾರಿ ಉಸಿರಾಡುತ್ತೇವೆ)

24 ಘಂಟೆ (1 ದಿನ) = 21600

(ಒಂದು ದಿನಕ್ಕೆ 21600 ಸಾರಿ ಉಸಿರಾಡುತ್ತೇವೆ)

(ಪ್ರಾಣದೇವರು ಪ್ರತಿನಿತ್ಯ 21600 ಹಂಸಮಂತ್ರ ಜಪವನ್ನು ನಮ್ಮೊಳಗಿದ್ದು ಮಾಡುತ್ತಾರೆ)

೧೪ ಮನುಗಳು –

ಸ್ವಾಯಂಭುವ ಮನು	ಸ್ವರೋಚಿಸ
ಉತ್ತಮ	ತಾಮಸ
ರೈವತ	ಚಾಕ್ಷುಸ
ವೈವಸ್ವತ	ಸಾವರ್ಣಿ
ದಕ್ಷಸಾವರ್ಣಿ	ಬ್ರಹ್ಮಸಾವರ್ಣಿ
ಧರ್ಮಸಾವರ್ಣಿ	ರುದ್ರಸಾವರ್ಣಿ
ದೇವಸಾವರ್ಣಿ	ಇಂದ್ರ ಸಾವರ್ಣಿ

ಶ್ರೀಮದಾಚಾರ್ಯರು 37 ಗ್ರಂಥಗಳನ್ನು ರಚಿಸಿದ್ದಾರೆ.

– ಈ ಗ್ರಂಥಗಳ ಸಮೂಹಕ್ಕೆ “ಸರ್ವಮೂಲ” ಎನ್ನುತ್ತಾರೆ.

1. ಬ್ರಹ್ಮಸೂತ್ರ ಭಾಷ್ಯ
2. ಅಣು ಭಾಷ್ಯ
3. ಅನುವ್ಯಾಖ್ಯಾನ
4. ನ್ಯಾಯ ವಿವರಣ
5. ಗೀತಾ ಭಾಷ್ಯ
6. ಗೀತಾತಾತ್ಪರ್ಯನಿರ್ಣಯ
7. ಈಶಾವಾಸ್ಯೋಪನಿಷದ್ಭಾಷ್ಯ
8. ತಲವಕಾರೋಪನಿಷದ್ಭಾಷ್ಯ
9. ಕಾಠಕೋಪನಿಷದ್ಭಾಷ್ಯ
10. ಷಟ್ಪ್ರಶ್ನೋಪನಿಷದ್ಭಾಷ್ಯ
11. ಅಥರ್ವಣೋಪನಿಷದ್ಭಾಷ್ಯ
12. ಮಾಂಡೂಕೋಪನಿಷದ್ಭಾಷ್ಯ
13. ತೈತ್ತಿರಿಯೋಪನಿಷದ್ಭಾಷ್ಯ
14. ಮಹೈತರೇಯೋಪನಿಷದ್ಭಾಶ್ಯ
15. ಛಾಂದೋಗ್ಯೋಪನಿಷದ್ಭಾಷ್ಯ
16. ಬೃಹದಾರಣ್ಯಕೋಪನಿಷದ್ಭಾಶ್ಯ
17. ಋಗ್ಭಾಷ್ಯ
18. ತತ್ವಸಂಖ್ಯಾನ
19. ತತ್ವವಿವೇಕ

20. ಪ್ರಮಾಣಲಕ್ಷಣ
21. ಕಥಾಲಕ್ಷಣ
22. ಉಪಾಧಿಖಂಡನ
23. ಮಾಯಾವಾದಖಂಡನ
24. ಪ್ರಪಂಚಮಿಥ್ಯಾತ್ವಾನುಮಾನಖಂಡನ
25. ತತ್ವೋದ್ಯೋತ
26. ವಿಷ್ಣುತತ್ವನಿರ್ಣಯ
27. ಕರ್ಮನಿರ್ಣಯ
28. ಮಹಾಭಾರತತಾತ್ಪರ್ಯನಿರ್ಣಯಃ
29. ಯಮಕಭಾರತ
30. ಭಾಗವತತಾತ್ಪರ್ಯನಿರ್ಣಯಃ
31. ಸದಾಚಾರಸ್ಮೃತಿ
32. ಕೃಷ್ಣಾಮೃತಮಹಾರ್ಣವ
33. ತಂತ್ರಸಾರಸಂಗ್ರಹ
34. ಯತಿಪ್ರಣವಕಲ್ಪ
35. ಜಯಂತೀನಿರ್ಣಯ
36. ನರಸಿಂಹ ನಖಸ್ತುತಿ
37. ದ್ವಾದಶಸ್ತೋತ್ರ